ಪ್ರತ್ಯೇಕ ಮಂಡಲಿ ರಚನೆಯಾಗದೇ ಹೋದರೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಿಂದ ಏನೇನೂ ಸಾಧ್ಯವಾಗಿಲ್ಲ. ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಮಲೆನಾಡಿನ ಶಾಸಕರನ್ನು ಒಟ್ಟಿಗೆ ಕರೆದು ಏನು ತೊಂದರೆ ಇದೆ, ಏನಾಗಬೇಕು ಎಂದು ಕೇಳಿ, ಈ ಬಗ್ಗೆ ಕ್ರಮ ತೆಗೆದುಕೊಳ್ಳದೇ ಹೋದರೆ ಮಲೆನಾಡಿನ ಜನ ಅತ್ಯಂತ ದುರ್ಗತಿಗೆ ಬಿದ್ದಿದ್ದಾರೆ, ಕೇಳುವವರಿಲ್ಲ ಎನ್ನುವ ಸ್ಥಿತಿಗೆ ಬಂದಿದ್ದಾರೆ, ಆದ್ದರಿಂದ ಮಂತ್ರಿಗಳು ಸ್ಪಷ್ಟವಾದ ರೀತಿಯಲ್ಲಿ ಆಶ್ವಾಸನೆ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಎರಡು ವಿಧವಾಗಿ ಮಲೆನಾಡಿನ ಅಭಿವೃದ್ಧಿಯನ್ನು ಸಾಧನೆ ಮಾಡುತ್ತಾ ಇದ್ದೇವೆ. ಪಶ್ಚಿಮ ಘಟ್ಟಗಳ ಯೋಜನೆ ಪ್ರಕಾರ, ಅದರಲ್ಲಿ ಶಿವಮೊಗ್ಗ, ಮಂಗಳೂರು, ಚಿಕ್ಕಮಗಳೂರು ಬರುತ್ತದೆ ಪಶ್ಚಿಮ ಘಟ್ಟದ ಎಲ್ಲಾ ಜಿಲ್ಲೆಗಳು ಬರುತ್ತವೆ. ಮತ್ತೆ ಇಂಟರ್ ಲ್ಯಾಂಡ್ ಡೆವಲಪ್‌ಮೆಂಟ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮಾತ್ರ ಬರುವುದಿಲ್ಲ. ಮಂಗಳೂರು ಹಿನ್ನಾಡಿನ ಸಮಾರು ೯ ಜಿಲ್ಲೆಗಳು ಬರುತ್ತವೆ. ಮಲೆನಾಡಿನ ೯ ಜಿಲ್ಲೆಗಳು ಹೊಂದಿಕೊಂಡಿರುವುದರಿಂದ ಅಲ್ಲಿ ಕೈಗಾರಿಕಾಭಿವೃದ್ಧಿ, ಕೃಷಿ ಅಭಿವೃದ್ಧಿ ಮುಂತಾದ ಅಭಿವೃದ್ಧಿಗಳನ್ನು ಸಾಧಿಸಬೇಕು ಎಂದು ಅಂದಾಜು ಮಾಡಿದ್ದೇವೆ. ಮಾನ್ಯ ಸದಸ್ಯರು ಮಲೆನಾಡಿನ ಅಭಿವೃದ್ಧಿಗೆ ಪ್ರತ್ಯೇಕ ಮಂಡಲಿಯನ್ನು ರಚಿಸುವ ಬಗ್ಗೆ ಆಶ್ವಾಸನೆ ಕೊಡಬೇಕು ಎಂದು ಕೇಳಿಕೊಳ್ಳುತ್ತಾ ಇದ್ದಾರೆ: ಈಗ ನಾವು ಇಂಟರ್ ಲ್ಯಾಂಡ್ ಡೆವಲಪ್‌ಮೆಂಟ್‌ನಲ್ಲಿ ಮಲೆನಾಡಿನ ಜಿಲ್ಲೆಗಳನ್ನೇ ಹೊಂದಿಕೊಂಡಿರತಕ್ಕ ಜಿಲ್ಲೆಗಳ ಅಭಿವೃದ್ಧಿ ಹೇಗೆ ಆಗಬೇಕು, ಮಲೆನಾಡಿನ ಅಭಿವೃದ್ಧಿಗೆ ಪ್ರತ್ಯೇಕ ಮಂಡಲಿ ಮಾಡಬೇಕೇ, ಪ್ಲಾನಿಂಟ್ ಸೆಕ್ಟಾರ್ ಅಂದರೆ, ಜೋರ್ಡ್ ಅಥವಾ ಕಾರ್ಪೊರೇಷನ್ ಮೂಲಕ ಮಾಡಬೇಕೇ ಎಂದು ಕಳೆದ ವಾರ ಪ್ಲಾನಿಂಗ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಒಂದು ಟೆಕ್ನಿಕಲ್ ವರ್ಕಿಂಗ್ ಗ್ರೂಪನ್ನು ರಚನೆ ಮಾಡಿದ್ದೇವೆ. ಅವರು ಡಿಸೆಂಬರ್ ೧೯೮೦ ರೊಳಗೆ ಒಂದು ವರದಿಯನ್ನು ಒಪ್ಪಿಸಬೇಕು. ಅವರು ಶಾಸಕರನ್ನು ಮತ್ತು ಮಲೆನಾಡಿನ ಅಭಿವೃದ್ಧಿಗೆ ಹೊಂದಿಕೊಂಡಂಥ ಎಲ್ಲಾ ಜನರ ಜೊತೆಯಲ್ಲಿ ಸಮಾಲೋಚನೆ ಮಾಡಿಕೊಂಡು, ೧೯೮೦-೮೫ ರ ಒನೇ ಯೋಜನೆಯ ಒಂದು ಪರಿಧಿಯಲ್ಲಿ ಯಾವರೀತಿ ಮಲೆನಾಡಿನ ಪ್ರದೇಶಗಳ ಅಭಿವೃದ್ಧಿಯಾಗಬೇಕು, ಪ್ರತ್ಯೇಕ ಮಂಡಲಿ ಮಾಡಬೇಕು ಅಂದರೆ, ಮಲೆನಾಡಿನ ಅಭಿವೃದ್ಧಿ ಮಂಡಲಿಯನ್ನು ಮಾಡುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಇದರಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆ ಬಿಟ್ಟು ಹೋಗಿದೆ, ಅದನ್ನು ಸೇರಿಸಿಕೊಳ್ಳಬೇಕು.

ಶ್ರೀ ಎಂ.ಸಿ. ನಾನಯ್ಯ.—ಇದು ಅತ್ಯಂತ ಮುಖ್ಯವಾದ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಆ ಭಾಗದಿಂದ ಬರತಕ್ಕವರು.

(ನಾಲ್ಕೈದು ಜನ ಸದಸ್ಯರು ಒಟ್ಟಿಗೆ ಎಂದು ನಿಂತು ಮಲೆನಾಡಿನ ಅಭಿವೃದ್ಧಿ ಬಗ್ಗೆ ಪ್ರಶ್ನೆ ಕೇಳಿದರು)

(Interruptions)

ಅಧ್ಯಕ್ಷರು.—ಎಲ್ಲರೂ ಒಂದೇ ಸಲ ಎದ್ದು ನಿಂತುಕೊಂಡರೆ ಹೇಗೆ, ಕುಳಿತುಕೊಳ್ಳಿ, ಹಾಫ್-ಆನ್-ಆವರ್ ಡಿಸ್ಕೆಷನ್‌ಗೆ ಬೇಕಾದರೆ ಕಳಿಸಿಕೊಡಿ, ನಾನೇ ಆಲೋಚನೆ ಮಾಡುತ್ತೇನೆ.

Expenditure for Security arrangements for National Executive Committee Meeting of Janatha Party During 1978.

437. SRI G.K. TAKKED (Parasgad) —Will the Chief Minister be pleased to state.—

the expenditure incurred by the State Government for Bandobust and other security arrangements item-wise during the National Executive Committee meeting of the Janatha Party held in the State between January and February 1978?

SRI R. GUNDU RAO (Chief Minister).—Details of expenditure incurred are as follows.—

		Rs.—P.
(1)	Barricading	40,705-00
(2)	Security and Bandobust ...	2,895-00
(3)	Daily allowance for the Police Personnel	27,296-00
	Total ...	70,896-00

ಶ್ರೀ ಜಿ.ಕೆ. ತಕ್ಕೇಡ್.—ಸ್ವಾಮಿ ಅಡ್ವಗಟ್ಟು ಹಾಕಲು ೪೦,೭೦೫ ರೂ.ಗಳನ್ನು ಖರ್ಚುಮಾಡಲಾಗಿದೆಯೆಂದು ಉತ್ತರದಲ್ಲಿ ಹೇಳಿದ್ದೀರಿ ಆ ಸಮ್ಮೇಳನಕ್ಕೆ ಎಷ್ಟು ಜನ ಬಂದಿದ್ದರು ? ಎಷ್ಟು ಸ್ಥಳದ ವಿಸ್ತರಣೆಯಲ್ಲಿ ಅಡ್ವಗಟ್ಟಿಯನ್ನು ಹಾಕಲಾಗಿತ್ತು? ಮತ್ತು ಎಷ್ಟು ಜನ ಪೋಲೀಸರನ್ನು ಅಲ್ಲಿ ಬಂದೋಬಸ್ತಿಗಾಗಿ ನೇಮಿಸಲಾಗಿತ್ತು? ಮತ್ತು ಇದೇ ತರಹದ ಬೇರೆ ಬೇರೆ ರಾಜಕೀಯ ಪಕ್ಷಗಳ ಸಮ್ಮೇಳನ ಮತ್ತು ಬಹಿರಂಗ ಸಭೆಗಳಾದರೆ ಖರ್ಚು ಮಾಡುತ್ತೀರಾ ಹೇಗೆ? ಇಷ್ಟೇ ಸೌಕರ್ಯ ಮತ್ತು ಅನುಕೂಲಗಳನ್ನು ಇತರೇ ಪಕ್ಷದವರಿಗೆ ಒದಗಿಸುತ್ತೀರಾ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವಂಥಾ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಆ ಕಾಲದಲ್ಲಿ ಜನತಾ ಪಕ್ಷದ ಎಗ್ಸಿಕ್ಯೂಟಿವ್ ಕಮಿಟಿ ಮೀಟಿಂಗ್ ಬೆಂಗಳೂರು ನಗರದ ಹತ್ತಿರ ಇರುವ ತಿಪ್ಪಗೊಂಡನ ಹಳ್ಳಿಯಲ್ಲಿ ನಡೆಯಿತು, ಆ ಸಭೆಗೆ ಜನತಾ ಪಕ್ಷದ ಅಧ್ಯಕ್ಷರು ಮತ್ತು ಸುಮಾರು ೧೫ ಜನ ಕೇಂದ್ರದ ಮಂತ್ರಿಗಳು ಮತ್ತು ಆಗಿನ ಪ್ರಧಾನ ಮಂತ್ರಿಗಳು ಆಗಮಿಸಿದ್ದರು. ಪ್ರಧಾನ ಮಂತ್ರಿಗಳವರು ಆ ಮೀಟಿಂಗ್‌ಗೆ ಆಟೆಂಡ್ ಮಾಡಿ ಆ ನಂತರ ಸಾಯಂಕಾಲ ಬಹಿರಂಗ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದ್ದರು. ಯಾರೇ ಪ್ರಧಾನ ಮಂತ್ರಿಗಳಾಗಿರಲೀ ಯಾರೇ ಬೇರೆ ರಾಜ್ಯದ ಮಂತ್ರಿಗಳು ಬರಲಿ ಅಂಥವರಿಗೆ ರಕ್ಷಣೆಯನ್ನು ಒದಗಿಸಿ ಕೊಡತಕ್ಕಂಥದ್ದು ಸರ್ಕಾರಗಳ ಜವಾಬ್ದಾರಿಯಾಗಿರುತ್ತದೆ. ಆ ದೃಷ್ಟಿಯಿಂದ ಅವರಿಗೆ ರಕ್ಷಣೆ ಕೊಡುವ ಹಿತದೃಷ್ಟಿಯಿಂದ ಇಷ್ಟು ಹಣ ಖರ್ಚಾಗಿದೆಯೆಂದು ತಿಳಿಸಿದ್ದೇನೆ.

ಶ್ರೀ ಜಿ.ಕೆ. ತಕ್ಕೇಡ್.—ಬೇರೆ ರಾಜಕೀಯ ಪಕ್ಷಗಳವರು ಇಲ್ಲಿ ಈ ತರಹ ಸಮ್ಮೇಳನ ಸಭೆಗಳನ್ನು ನಡೆಸಿದರೆ ಇಷ್ಟು ಹಣವನ್ನು ಖರ್ಚು ಮಾಡುತ್ತೀರಾ? ಅವರು ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆಗೊಸ್ಕರ ಬಂದಿದಾಗ್ಯೂ ಸಹ ಇಷ್ಟೊಂದು ಹಣವನ್ನು ನಮ್ಮ ಸರ್ಕಾರದವರು ಖರ್ಚು ಮಾಡುವುದಕ್ಕೆ ಬರುತ್ತದೆಯೇ? ಇಲ್ಲದಿದ್ದರೆ ಅವರಿಂದ ಏನಾದರೂ ಹಣವನ್ನು ವಸೂಲಿ ಮಾಡಿದ್ದೀರಾ? ಅದು ಕೇವಲ ರಾಜಕೀಯ ಪಕ್ಷದ ಸಭೆಯಾಗಿತ್ತು, ಸಾರ್ವಜನಿಕ ಸಭೆಯೊಂದೇ ಆಗಿರಲಿಲ್ಲ. ಆದಕ್ಕೆ ಇಷ್ಟೊಂದು ಹಣವನ್ನು ಖರ್ಚುಮಾಡಿರುವುದಕ್ಕೆ ಏನಾದರೂ ಜನತಾ ಪಕ್ಷದವರಿಂದ ಹಣವನ್ನು ವಸೂಲಿ ಮಾಡಿದ್ದೀರಾ?

ಶ್ರೀ ಆರ್. ಗುಂಡೂರಾವ್.—ಬೇರೆ ರಾಜಕೀಯ ಪಕ್ಷಗಳವರು ಬಂದರೆ ಏನು ಮಾಡುತ್ತೀರಿ ಎಂದು ತಾವು ಕೇಳುತ್ತಿರುವ ಪ್ರಶ್ನೆಗೆ ಉತ್ತರ ಹೇಳುವುದಾದರೆ, ಯಾವುದೇ ಪಕ್ಷದವರು ಇಲ್ಲಿಗೆ ಬರಲಿ ಬಂದಾಗ ಅವರಿಗೆ ರಕ್ಷಣೆ ಕೊಡುವ ಜವಾಬ್ದಾರಿ ಅಯಾಯಾ ಪ್ರದೇಶದ ಸರ್ಕಾರಗಳವರ ಜವಾಬ್ದಾರಿಯಾಗಿರುತ್ತದೆ. ಇವತ್ತು ಬೆಂಗಳೂರಿಗೆ ಬಂಗಾಳದಿಂದ ಕಮ್ಯುನಿಸ್ಟ್ ಸರ್ಕಾರದವರು ಬಂದರೆ ಅವರಿಗೆ ನಾವು ರಕ್ಷಣೆ ಕೊಡಲೇಬೇಕು ಅದೇ ರೀತಿ ಕೇರಳದ ಮುಖ್ಯ ಮಂತ್ರಿಗಳು, ಮಂತ್ರಿಗಳು ಕರ್ನಾಟಕ ರಾಜ್ಯಕ್ಕೆ ಬಂದರೆ ಅವರಿಗೂ ರಕ್ಷಣೆಯನ್ನು ಕೊಡಲೇಬೇಕು ಅದೇ ರೀತಿ ಪಕ್ಕದ ತಮಿಳುನಾಡಿನಿಂದ ಎ.ಐ.ಡಿ.ಎಂ ಕೆ.ಯವರು ಬಂದರೆ ಅವರಿಗೂ ಸಹ ನಾವು ರಕ್ಷಣೆಯ ಜವಾಬ್ದಾರಿಯನ್ನು ಹೊರಬೇಕು. ಇದು ಬರೀ ಪಾರ್ಟಿ ಮೀಟಿಂಗ್ ಎಂದು ಬರುವುದಿಲ್ಲ, ಸರ್ಕಾರಿ ಕೆಲಸವಿರುತ್ತದೆ ಅದರ ಜೊತೆಗೆ ಪಾರ್ಟಿ ಮೀಟಿಂಗ್ ಆಟೆಂಡ್ ಮಾಡುತ್ತಾರೆ. ಇದೂ ಎಲ್ಲಾ ಕಡೆಯೂ ನಡೆಯುತಕ್ಕ ಪದ್ಧತಿ, ಒಂದು ವೇಳೆ ಪಾರ್ಟಿಗಳಿಗೊಸ್ಕರವಾಗಿ ಏನಾದರೂ ಖರ್ಚು ಮಾಡಿದ್ದರೆ ಅದನ್ನು ವಸೂಲಿ ಮಾಡಲಾಗುತ್ತದೆ.

ಶ್ರೀ ಜಿ.ಕೆ. ತಕ್ಕೇಡ್.—ಮಾನ್ಯ ಅಧ್ಯಕ್ಷರೇ ಅದು ಕೇವಲ ಜನತಾ ಪಕ್ಷದವರ ಕಾರ್ಯಕಾರಿ ಸಮಿತಿ ಸಭೆ ನಡೆದಿರತಕ್ಕಂಥಾದ್ದು ಸಾರ್ವಜನಿಕ ಸಭೆಯಲ್ಲ, ಅದುದರಿಂದ ಜನತಾ ಪಕ್ಷದವರಿಂದ ಎಷ್ಟು ಹಣವನ್ನು ವಸೂಲಿ ಮಾಡಿದ್ದೀರಿ?

ಶ್ರೀ ಆರ್. ಗುಂಡೂರಾವ್.— ಅಧ್ಯಕ್ಷರೇ. ಪಾಪ ಅವರು ತಪ್ಪು ತಿಳಿದುಕೊಂಡಿದ್ದಾರೆ. ಆ ಪಕ್ಷ ಈ ಪಕ್ಷದವರು ಅಂತ ಖರ್ಚು ಮಾಡುವುದಿಲ್ಲ ಅವತ್ತಿನ ದಿವಸ ರಕ್ಷಣಾ ಮಂತ್ರಿಗಳವರು, ಪ್ರಧಾನಮಂತ್ರಿಗಳವರು ಮತ್ತಿತರ ಮಂತ್ರಿಗಳವರು ಇಲ್ಲಿಗೆ ಬಂದು ಸಾರ್ವಜನಿಕ ಸಭೆಯಲ್ಲೂ ಸಹ ಭಾಗವಹಿಸಿದ್ದಾರೆ ಅದಕ್ಕೆ ಅವರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಖರ್ಚು ಮಾಡಲಾಗಿದೆಯೆಂದು ಈಗಾಗಲೇ ಹೇಳಿದ್ದಾನೆ. ಒಂದು ವೇಳೆ ಅವರು ಪಾರ್ಟಿ ಮೀಟಿಂಗ್‌ಗೆ ಹೋದರೆ ಅಲ್ಲಿ ಕಾಫಿ ಕುಡಿದರೆ ಅದನ್ನು ಪಾರ್ಟಿಯವರು ಕೊಡುತ್ತಾರೆ, ಅದಕ್ಕೆಲ್ಲಾ ಸರ್ಕಾರ ಖರ್ಚುಮಾಡುವುದಿಲ್ಲ.

ಶ್ರೀ ಎಚ್.ಡಿ. ದೇವೆಗೌಡ.—ಅಧ್ಯಕ್ಷರೇ, ಪ್ರೈಮಿನಿಸ್ಟರ್‌ರವರು ಯಾವುದೇ ಪಕ್ಷದವರಿರಬಹುದು ಅವರು ಪ್ರವಾಸ ಮಾಡತಕ್ಕ ಕಾಲದಲ್ಲಿ ಖಾಸಗಿ ಪ್ರವಾಸ. ಸರ್ಕಾರಿ ಪ್ರವಾಸ ಅಂತ ಇರುವುದಿಲ್ಲ. ಇವತ್ತು ಪ್ರಧಾನ ಮಂತ್ರಿಗಳು ಬರುತ್ತಾರೆಂದು ಬೇರೆ ಬ್ಯಾರಿಕೇಡಿಂಗ್ ಕಟ್ಟುವುದಿಲ್ಲ, ಇಲ್ಲ ಬೇರೆ ಮಂತ್ರಿಗಳವರು ಬರುತ್ತಾರೆಂದು ಬೇರೆ ಬ್ಯಾರಿಕೇಡಿಂಗ್ ಕಟ್ಟುವುದಿಲ್ಲ, ಅದಕ್ಕೆಲ್ಲಾ ಕೆಲವಾರು ನಿಯಮಗಳಿವೆ, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರು ಸ್ಪಷ್ಟೀಕರಣ ಮಾಡಿದ್ದರೆ ಮಾನ್ಯ ಸದಸ್ಯರಿಗೆ ಹಿಡಿದಿರುವ ಸಂಶಯ ಭೂತ ನಿವಾರಣೆಯಾಗುತ್ತಿತ್ತು.

ಶ್ರೀ ಆರ್. ಗುಂಡೂರಾವ್.—ಈಗೆ ಬರೀ ಪ್ರಧಾನ ಮಂತ್ರಿಗಳೊಬ್ಬರೇ ಅಲ್ಲ, ಇನ್ನು ಯಾರೇ ಬಂದು ಇಲ್ಲಿಗೆ ಭಾಷಣ ಮಾಡುತ್ತಾರೆಂದಾಗ ೪,೫ ಲಕ್ಷ ಜನ ಸೇರುತ್ತಾರೆ ಎನ್ನುವ ಅಂದಾಜು ಇದ್ದಾಗೆ ಎಲ್ಲಾ ತರಹದ ರಕ್ಷಣೆ, ಮತ್ತು ಸೌಲಭ್ಯಗಳನ್ನೂ ಸಹ ಒದಗಿಸಲೇ ಬೇಕಾಗುತ್ತದೆ.

ಶ್ರೀ ಎಚ್.ಡಿ. ದೇವೆಗೌಡ.—ಈಗ ಜೆ.ಪಿ.ಯವರು ಬಂದಿದ್ದರು, ಆಗ ದೊಡ್ಡ ಸಭೆ ಸೇರಿತ್ತು ಅದಕ್ಕೆ ಸರಿಯಾದ ಬಂದೋಬಸ್ತು ಮಾಡಲೇಬೇಕಾಗಿತ್ತದೆ. ಇಲ್ಲ ತಾವೇ ಯಾವುದೋ ಒಂದು ಊರಿನಲ್ಲಿ ಭಾಷಣ ಮಾಡುತ್ತೀರಿ, ಅಥವಾ ನಾವೇ ಯಾವುದಾದರೂ ಒಂದು ಊರಿನಲ್ಲಿ ಭಾಷಣ ಮಾಡುತ್ತೇವೆಂದಾಗ ಎಲ್ಲಾ ತರಹದ ಬಂದೋಬಸ್ತು ಮಾಡಲೇ ಬೇಕಾಗುತ್ತದೆ.

Ratio fixed for posting of different categories of staff in Motor Vehicles Department.

496. SMT S. PRAMILA (Chamarajpet)–Will the Minister for Transport and Minor Irrigation be pleased to state.—

(*a*) the ratio fixed for posting of the Ministerial Staff and the Techincal Motor Vehicles Inspectors Staff on promotion basis as Assistant Regional Transport Officers or Regional Transport Officers ;

(*b*) whether it is fact that discrimination is being practised in not properly giving the same benefits to the Ministerial staff in State Transport Authority and the Regional Transport Authority Officers in the State ;

(c) whether Government intend to follow the practice of giving promotions to the Ministerial staff to the post of Regional Transport Officers as in other States?